Karnataka State Audit and Accounts Department,
3rd floor 'A' Block , T T M C Building,
K.H. Road, Shanthinagar,
Bengaluru-560 027.
Phone No:- 080- 22214817
Fax No.:- 080- 22216500
**Email: ksaadtraining@gmail.com**
**Website: www.ksaad.karnataka.gov.in**

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, 3ನೇ ಮಹಡಿ, 'ಎ' ಬ್ಲಾಕ್, ಟಿಟಿಎಂಸಿ ಕಟ್ಟಡ,
ಕೆ ಹೆಚ್ ರೋಡ್, ಶಾಂತಿನಗರ,
ಬೆಂಗಳೂರು-560 027.
ದೂರವಾಣಿ ಸಂಖ್ಯೆ:- 080- 22214817
ಫ್ಯಾಕ್ಸ್ ಸಂಖ್ಯೆ:- 080- 22216500
ಇ-ಮೇಲ್: : ksaadtraining@gmail.com
**Website: www.ksaad.karnataka.gov.in**

ಸಂಖ್ಯೆ: ಕರಾಲೆ&ಲೆಪ/ತರಬೇತಿ/ಇತರೆ-03/2022-23 /402    ದಿನಾಂಕ: 23-05-2023

**::ಸುತ್ತೋಲೆ::**

ವಿಷಯ: ನಿಗದಿ ಪಡಿಸಿರುವ ತರಬೇತಿಗಳನ್ನು ಪಡೆಯದೆ ಇರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿವರವನ್ನು ಕೇಂದ್ರ ಕಛೇರಿಗೆ ಸಲ್ಲಿಸುವ ಕುರಿತು.

ಉಲ್ಲೇಖ ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ ದಿನಾಂಕ: 17.02.2023

*********

ಈ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮ 2011 ಮತ್ತು 2015ರನ್ವಯ ಪರೀಕ್ಷಾವಧಿ ಘೋಷಣೆ ಮತ್ತು ಮುಂಬಡ್ತಿಗೆ ನಿಗಧಿಪಡಿಸಿರುವ ಇಲಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗವುದು ಮತ್ತು ತರಬೇತಿಗಳನ್ನು ಪೂರೈಸುವುದು ಕಡ್ಡಾಯವಾಗಿರುತ್ತದೆ. ತರಬೇತಿ ಹಾಗೂ ಇಲಾಖಾ ಪರೀಕ್ಷೆಗಳ ಪ್ರಮಾಣ ಪತ್ರಗಳ ಆಧಾರದ ಮೇಲೆ ಪರೀಕ್ಷಾವಧಿ ಘೋಷಣೆ ಮತ್ತು ಮುಂಬಡ್ತಿಗಳನ್ನು ನೀಡಲಾಗುತ್ತಿದೆ.

ಉಲ್ಲೇಖ 2 ರ ಈ ಕಛೇರಿಯ ಸುತ್ತೋಲೆಯಲ್ಲಿ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳು ಅಯಾ ವೃಂದಗಳಿಗೆ ನಿಗಧಿಪಡಿಸಲಾದ ಇಲಾಖಾ ಪರೀಕ್ಷೆಗಳ ಹಾಗೂ ಪಡೆಯಲಾದ ತರಬೇತಿಗಳ ಪ್ರಮಾಣ ಪತ್ರಗಳನ್ನು ದಿನಾಂಕ 24.02.2023ರೊಳಗಾಗಿ ಈ ಕಛೇರಿಯ ಇ-ಮೇಲ್ ಐಡಿ ksaadtrainingcertificates@gmail.com ಗೆ ಕಳುಹಿಸಲು ಸೂಚಿಸಲಾಗಿತ್ತು. ಆದರೆ ಹಲವು ಅಧಿಕಾರಿ/ ಸಿಬ್ಬಂದಿಗಳು ತರಬೇತಿ ಹಾಗೂ ಇಲಾಖಾ ಪರೀಕ್ಷೆಗಳ ಪ್ರಮಾಣ ಪತ್ರಗಳನ್ನು ಈ ವರೆಗೆ ಸಲ್ಲಿಸಿರುವುದಿಲ್ಲ. ಆದುದರಿಂದ ಈ ಇಲಾಖೆಯ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳು ದಿನಾಂಕ 31.05.2023ರ ಒಳಗಾಗಿ ತಾವು ಪೂರೈಸಿರುವ ತರಬೇತಿ ಹಾಗೂ ಇಲಾಖಾ ಪರೀಕ್ಷೆಗಳ ಪ್ರಮಾಣ ಪತ್ರಗಳನ್ನು ಈ ಮೇಲೆ ಸೂಚಿಸಲಾದ ಇ-ಮೇಲ್ ಐಡಿಗೆ ಕಳುಹಿಸಲು ಸೂಚಿಸಿದೆ. ತಪ್ಪಿದಲ್ಲಿ ಅಂತಹ ಅಧಿಕಾರಿ/ ಸಿಬ್ಬಂದಿಗಳು ಪರೀಕ್ಷಾವಧಿ ಘೋಷಣೆ ಹಾಗೂ ಮುಂಬಡ್ತಿಗಳಿಂದ ವಂಚಿತರಾದಲ್ಲಿ ನೇರವಾಗಿ ಅವರೇ ಹೊಣೆಗಾರರಾಗಿರುತ್ತಾರೆ.

ಮುಂದುವರೆಸುತ್ತಾ, ನಿಗಧಿಪಡಿಸಲಾದ ತರಬೇತಿಗಳನ್ನು ಇಲ್ಲಿಯವರೆಗೆ ಪಡೆಯದೆ ಇರುವ ಅಧಿಕಾರಿ/ ಸಿಬ್ಬಂದಿಗಳು ತಾವು ಪಡೆಯಬೇಕಾಗಿರುವ ತರಬೇತಿ ವಿವರಗಳೊಂದಿಗೆ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ, ಇ-ಮೇಲ್ ಐಡಿಯ ಸಂಪೂರ್ಣ ವಿವರಗಳನ್ನು ದಿನಾಂಕ 31.05.2023ರೊಳಗಾಗಿ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ನಿಗದಿಪಡಿಸಿದ ದಿನಾಂಕದೊಳಗಾಗಿ ಮಾಹಿತಿಯನ್ನು ನೀಡದಿದ್ದಲ್ಲಿ ಮುಂದೆ ಆಯೋಜಿಸುವ ತರಬೇತಿಗಳಿಗೆ ತಮ್ಮನ್ನು ನಿಯೋಜಿಸಲಾಗುವುದಿಲ್ಲವೆಂದು ಸೂಚಿಸಿಲಾಗಿದೆ.

**ಸೂಚನೆ: ಈಗಾಗಲೇ ಇಲಾಖಾ ಪರೀಕ್ಷೆಯ ಪ್ರಮಾಣ ಪತ್ರಗಳು ಹಾಗೂ ತರಬೇತಿ ಪ್ರಮಾಣ ಪತ್ರಗಳ ಸಾಫ್ಟ್ ಪ್ರತಿಯನ್ನು ಹಾಗೂ Hard copy ಯನ್ನು ಸಲ್ಲಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳು ಈ ಸುತ್ತೋಲೆಯನ್ನು ಉಪೇಕ್ಷಿಸಲು ಸೂಚಿಸಿದೆ ( Ignore this Cicular if already submitted)**

ಪ್ರಧಾನ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು.

<u>ಪ್ರತಿಯನ್ನು:-</u>

1. ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು, ಬೆಳಗಾವಿ, ಮೈಸೂರು, ಕಲಬುರಗಿ. ಕಛೇರಿಗಳಿಗೆ ಮಾಹಿತಿಗಾಗಿ.
2. ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ.
3. ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.